<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ - ಶ್ರೀ. ಎನ್.ಎಸ್.ಎ. ವಕೀಲರಿಂದ ಆರೋಪಿಯ ಪರವಾಗಿ</u>

14. ನನಗೆ ಕೃಷಿ, ಅಂಗಡಿ ಹಾಗೂ ಬಾಡಿಗೆಯ ರೂಂಗಳು ಇವೆ. ಆರೋಪಿ ಹಾಗೂ ಅವರ ಮಗಳು ನಮ್ಮ ತೋಟದ ಕೆಲಸಕ್ಕೆ ಹಾಗೂ ರೂಂ ಸ್ವಚ್ಛತೆಗಾಗಿ ಬರುತ್ತಿದ್ದರು ಹಾಗಾಗಿ ಪರಿಚಯ. ಆರೋಪಿಗೆ ದಿನಕ್ಕೆ ರೂ. 600/- ಹಾಗೂ ಅವರ ಮಗಳು ಹೇಮಲತಾ ರವರಿಗೆ ರೂ. 300/- ಸಂಬಳ ದಿನಕ್ಕೆ ಇತ್ತು. ಆರೋಪಿಯು ನನ್ನ ಬಳಿ ಐದು ವರ್ಷ ಕೆಲಸ ಮಾಡಿರುತ್ತಾರೆ. ಅವರಿಗೆ ದಿನಗೂಲಿ ಸಂಬಳ. ಆ ರೀತಿ ಆರೋಪಿ ಹಾಗೂ ಆತನ ಮಗಳು ಮತ್ತು ಇನ್ನೊಬ್ಬ ಅಜ್ಜಿ ಇದ್ದಾರೆ.

15. ಹೇಮಲತಾರವರ ಯಾವುದೇ ಚೆಕ್ಕು ನನ್ನ ಬಳಿ ಇರುವುದಿಲ್ಲ. ಆದರೆ ಚೆಕ್ಕು ಕೊಡುತ್ತೇನೆ ಎಂದು ಹೇಳಿ ಕೊಟ್ಟಿರುವುದಿಲ್ಲ. ಹೇಮಲತಾ ರವರ ಮದುವೆಗೆ ನಾನು ರೂ. 5,00,000/- ಹಣವನ್ನು ಖರ್ಚು ಮಾಡಿದ್ದೇ, ಆದರೆ ಅದರ ಬಾಬ್ತು ಅವರು ಚೆಕ್ಕನ್ನು ಕೊಡುತ್ತೇನೆ ಎಂದು ಹೇಳಿ ನಂತರ ಕೊಟ್ಟಿರುವುದಿಲ್ಲ. 2024 ರ ಎಪ್ರಿಲ್ ನಂತರ ಹೇಮಲತಾ ಹಾಗೂ ಆರೋಪಿಯವರು ನಮ್ಮ ಮನೆಗೆ ಕೆಲಸಕ್ಕೆ ಬಂದಿರುವುದಿಲ್ಲ. ಹೇಮಲತಾ ಮತ್ತು ಆರೋಪಿಗೆ ನಗದು ರೂಪದಲ್ಲಿ ಸಂಬಳ ನೀಡುತ್ತಿದ್ದೇ.

16. ಆರೋಪಿಗೆ ಸಾಲವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಅವರ ಮಗಳಿಗೂ ಸಹಃ ನಗದು ರೂಪದಲ್ಲಿ ಸಾಲ ನೀಡಿರುತ್ತೇನೆ. ನಗದು ರೂಪದಲ್ಲಿ ಅಲ್ಲದೇ ಬೇರೆ ಯಾವುದೇ ರೂಪದಲ್ಲಿ ನನ್ನ ಹಾಗೂ ಆರೋಪಿ ಮತ್ತು ಆತನ ಮಗಳ ನಡುವೆ ವ್ಯವಹಾರ ಇರುವುದಿಲ್ಲ. ಆರೋಪಿಗೆ ಮತ್ತು ಅವರ ಮಗಳಿಗೆ ನಾನು ಸಾಲ ನೀಡಿದ ದಿನಾಂಕ ಗೊತ್ತಿಲ್ಲ. ಆದರೆ 5-6 ವರ್ಷಗಳ ಹಿಂದೆ ನೀಡಿರುತ್ತೇನೆ. ಎರಡು ತಿಂಗಳವಳಗೆ ಹಂತ ಹಂತವಾಗಿ ಸಾಲ ನೀಡಿರುತ್ತೇನೆ. ಆರೋಪಿ ಹಾಗೂ ಅವರ ಮಗಳು ಒಂದೇ ಮನೆಯಿಂದ ಕೆಲಸಕ್ಕೆ ಬರುತ್ತಿದ್ದರು.

17. ಆರೋಪಿಯ ಮಗಳಿಗೆ ನಾನು ಹಣ ನೀಡಿರುವ ವಿಚಾರ ಆರೋಪಿಗೆ ಗೊತ್ತಿಲ್ಲ. ಅದೇ ರೀತಿ ಆರೋಪಿಗೆ ನೀಡಿರುವ ಹಣದ ವಿಚಾರ ಅವರ ಮಗಳಿಗೆ ಗೊತ್ತಿದೆ, ಏಕೆಂದರೆ ಹಣವನ್ನು ಆರೋಪಿಯ ಪರವಾಗಿ ಅವರ ಮಗಳು ಸಾಲ ಕೇಳಿದ್ದರು. ಮಗಳ ಮದುವೆಗೆ ಎಂದು ಆರೋಪಿಯು ನನ್ನ ಬಳಿ ಸಹಾಯ ಕೇಳಿರುವುದಿಲ್ಲ. ಮಗಳು ಹಣ ಕೇಳಿದರೆ ಕೊಡಿ ಎಂದು ಆರೋಪಿ ಹೇಳಿದ್ದರು, ಆದರೆ

ಆರೋಪಿಯ ಮಗಳಿಗೆ ಹಣ ನೀಡಿರುವ ವಿಚಾರ ಅವರಿಗೆ ಗೊತ್ತಿಲ್ಲ. ನನ್ನ ಮನೆಯಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಆರೋಪಿಗೆ ಹಾಗೂ ಅವರ ಮಗಳಿಗೆ ಬೇರೆ ಆದಾಯ ಇದೆ. ಸಂಬಳದ ಪೈಕಿ ನನ್ನ ಸಾಲದ ಮೊತ್ತವನ್ನು ಕಡಿತಗೊಳಿಸಿ ಆರೋಪಿಗೆ ಹಾಗೂ ಅವರ ಮಗಳಿಗೆ ಸಂಬಳ ನೀಡಿರುವುದಿಲ್ಲ.

18. 2023 ರ ಕೊನೆಯಲ್ಲಿ ಆರೋಪಿ ಸಾಲ ಕೇಳಿದ್ದರು, ನಾನು 2024 ರ ಪೆಬ್ರುವರಿ ತಿಂಗಳಲ್ಲಿ ರೂ. 4,00,000/- ಹಾಗೂ ಮಾರ್ಚ್ ತಿಂಗಳಲ್ಲಿ ರೂ. 3,00,000/- ಹಣವನ್ನು ಸಾಲವಾಗಿ ನೀಡಿರುತ್ತೇನೆ. ಮನೆ ಗೋಡೆ ಕಟ್ಟಲು ಸಾಲ ಕೇಳಿರುತ್ತಾರೆ. ಆರೋಪಿಗೆ ಹಣ ನೀಡಿದ ಬಗ್ಗೆ ನನ್ನ ಬಳಿ ದಾಖಲಾತಿ ಇದೆ. ಸಾಕ್ಷಿ ಮುದುವರೆದು ದಾಖಲಾತಿ ಇಲ್ಲ ಎಂದು ಹೇಳುತ್ತಾರೆ. ತೋಟಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಸಂಬಳ ನೀಡಿದ ಬಗ್ಗೆ ದಾಖಲಾತಿ ಇರುವುದಿಲ್ಲ.

19. ನನಗೆ ಅರ್ಧ ಎಕರೆ ಆಸ್ತಿ ಇದೆ. ಅದರಿಂದ ಬರುವ ಆಧಾಯ ಹಾಗೂ ಖರ್ಚಿನ ಬಗ್ಗೆ ಬರೆದು ಇಡುವ ಹವ್ಯಾಸ ಇದೆ. ಆಧಾಯ ತೆರಿಗೆ ಕಟ್ಟಲು ಆ ರೀತಿ ಬರೆದು ಇಡುತ್ತೇನೆ. ಆದರೆ ನನ್ನ ಒಟ್ಟು ಆಧಾಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಅದನ್ನು ನನ್ನ ಸಿ.ಎ. ನೋಡಿಕೊಳ್ಳುತ್ತಾರೆ. ನಾನು ಆರೋಪಿಗೆ ಸಾಲ ನೀಡಿದ ಬಗ್ಗೆ ನನ್ನ ಆಧಾಯ ತೆರಿಗೆ ದಾಖಲಾತಿಯಲ್ಲಿ ಉಲ್ಲೇಖ ಇದೆ. ಸದರಿ ದಾಖಲಾತಿಗಳನ್ನು ಈ ನ್ಯಾಯಾಲಯದಲ್ಲಿ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

20. ಹೇಮಲತಾರವರಿಗೆ ನಾನು ಫೋನ್ ಪೇ ಮೂಲಕ ದಿನಾಂಕಃ 09.02.2024 ರಂದು ರೂ. 9000/-, ದಿನಾಂಕಃ 15.02.2024 ರಂದು ರೂ. 10,000/- ಹಾಗೂ ದಿನಾಂಕಃ 28.02.2024 ರಂದು ರೂ. 2000/- ಹಣವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸಂಬಳ ಆಗಿರಬಹುದು ಎಂದು ಹೇಳುತ್ತಾರೆ. ಆದಿಲ್ ಎಂಬ ವ್ಯಕ್ತಿ ನಮ್ಮ ಕಟ್ಟಡಗಳ ಮ್ಯಾನೇಜರ ಆಗಿದ್ದರು. ನನ್ನ ಫೋನ್ ನಂಬರ ನನಗೆ ನೆನಪಿದೆ. ಅದು 7204323520. ಸದರಿ ನಂಬರಗೆ ದಿನಾಂಕಃ 28.07.2023 ರಂದು ರೂ. 10,000/-, ದಿನಾಂಕಃ 07.10.2023 ರಂದು ರೂ. 4000/-, ದಿನಾಂಕಃ 21.10.2023 ರಂದು ರೂ. 20,200/-, ದಿನಾಂಕಃ 02.12.2023 ರಂದು ರೂ. 5000/-, ದಿನಾಂಕಃ 22.01.2024 ರಂದು ರೂ. 10,000/-, ದಿನಾಂಕಃ 15.03.2024 ರಂದು ರೂ. 5000/-, ದಿನಾಂಕಃ 05.04.2024 ರಂದು ರೂ. 5000/-, ದಿನಾಂಕಃ 07.03.2024 ರಂದು ರೂ. 10,000/-, ದಿನಾಂಕಃ

17.02.2024 ರಂದು ರೂ. 20,000/-, ದಿನಾಂಕ: 27.02.2024 ರಂದು ರೂ. 4500/-, ದಿನಾಂಕ: 17.03.2024 ರಂದು ರೂ. 5000/- ದಂತೆ ಹೇಮಲತಾ ರವರು ನನ್ನ ಖಾತೆಗೆ ಹಣ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಮಲತಾ ರವರು ನನ್ನಿಂದ ನಗದು ರೂಪದಲ್ಲಿ ಹಣ ಪಡೆದು ಆ ರೀತಿ ಹಣ ಹಾಕುತ್ತಿದ್ದರು ಎಂದು ಹೇಳುತ್ತಾರೆ.

21. ದಿನಾಂಕ: 01.10.2024 ರಂದು ಹೇಮಲತಾ ರವರು ನನ್ನ ಕಟ್ಟಡದ ವ್ಯವಸ್ಥಾಪಕರಾದ ಆದಿಲ್ ರವರ ಖಾತೆಗೆ ರೂ. 3500/- ನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಬಡ್ಡಿಗೆ ಸಾಲ ನೀಡುವ ವ್ಯವಹಾರವನ್ನು ಮಾಡುವುದಿಲ್ಲ. ಹೇಮಲತಾ ರವರು ನನ್ನ ಬಳಿ ರೂ. 2,25,000/- ಹಣವನ್ನು ಮಾತ್ರ ಕೈ ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ಮರು ಪಾವತಿಯಾಗಿ ಅವರು ನನಗೆ ರೂ. 2,60,000/- ಹಣವನ್ನು ಮರು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಹೇಮಲತಾ ರವರಿಗೆ ಸಾಲ ನೀಡುವ ಸಮಯದಲ್ಲಿ ಅವರಿಂದ ಎರಡರಿಂದ ಮೂರು ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದೇ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಾನು ಹೇಮಲತಾ ರವರ ಮೂಲಕ ನಿಪಿ 1 ರ ಖಾಲಿ ಚೆಕ್ಕನ್ನು ಪಡೆದುಕೊಂಡಿದ್ದೇ ಎಂದರೆ ಸರಿಯಲ್ಲ. ಹೇಮಲತಾರವರ ಮೇಲೆ ಒತ್ತಡ ಹೇರಿ ನಿಪಿ 1 ಕ್ಕೆ ಆರೋಪಿಯ ಸಹಿಯನ್ನು ಹೇಮಲತಾರವರಿಂದ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

22. ನಿಪಿ 1 ರಲ್ಲಿ ಹಣವನ್ನು ನಾನೇ ಉಲ್ಲೇಖ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಇದೂವರಗೂ ನನ್ನಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾಟ್ಸಪ್ ಇರುವ ಮೊಬೈಲ ಅನ್ನು ಬಳಕೆ ಮಾಡುತ್ತೇನೆ. ವಾಟ್ಸಪ್ ಮೂಲಕ ಹೇಮಲತಾರವರಿಗೆ ಮೇಸೆಜ್ ಕಳುಹಿಸಿ ಸಾಲ ಮರು ಪಾವತಿ ಮಾಡುವಂತೆ ಕೇಳಿರುತ್ತೇನೆ. ಅದೇ ರೀತಿ ವಾಟ್ಸಪ್ ನಲ್ಲಿ ನೀನು ಬಡ್ಡಿ ನೀಡದೆ ಇದ್ದರೇ ನಿನ್ನ ತಂದೆಯ ಖಾಲಿ ಚೆಕ್ಕನ್ನು ದುರುಪಯೋಗ ಮಾಡುತ್ತೇನೆ ಎಂದು ಧ್ವನಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಮನೆಗೆ ನುಗ್ಗಿ ಕೊಲೆ ಮಾಡುತ್ತೇನೆ ಎಂದು ಮೇಸೆಜ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ